

ಮೈಸೂರ ಗಿಜಿಟ್.

ನಂ. 8] ಸರ್ಕಾರದಿಂದ ಪ್ರಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 7, ಸ್ ೯ 1895.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇರ್ಸ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯೂಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ, ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್‌ಗಳು ವ ರೆಗ್ಯುಲೇಷನ್ಸ್‌ಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಸೂಚನೆ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ನಂಬೆ ಕೊಡಲ್ಪಡುತ್ತೆ.

೧ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ತಾರೀಖು 15ನೇ ಫಿಬ್ರವರಿ 1895.

ನಂ. 12455.—ಜಿ. 2784.—ಫೆನವನ್ನು ಹೊಂದಿದ ಶ್ರೀಮ್ಮ ಮಹಾರಾಣೀ ರೀಜಂಟರವರು, 1895ನೇ ಇಸವಿ ಫಿಬ್ರವರಿ ಗುರ್ರೇ ತಾರೀಖಿನಾರಭ್ಯ ಇದರಡಿ ಬರುವ ಮೊಕರರಾತಿಗಳು ಜಾರಿಗೆ ತರಲ್ಪಡತಕ್ಕದ್ದೆಂದು ಆಜ್ಞಾಪಿಸುತ್ತಾರೆ:—

ಶ್ರೀಮ್ಮ ಮಹಾರಾಣೀಯವರಿಗೆ ಕರ್ನಲ್ ಜೆ. ಪಿ. ಕ್ಯಾಂಬೆಲ್‌ಯವರು ಪ್ರೈವೇಟ್ ಸೆಕ್ರಟೆರಿಯಾಗಿಯೂ, ಮೆಸ್ಸರ್ ಯಂ. ಕಾಂತರಾಜ ಅರಸಿನವರು ಅಸಿಸ್ಟೆಂಟ್ ಪ್ರೈವೇಟ್ ಸೆಕ್ರಟೆರಿಯರಾಗಿಯೂ ಯಿರತಕ್ಕದ್ದು.

ತಾರೀಖು 25ನೇ ಫಿಬ್ರವರಿ 1895.

ನಂ. 13038.—ಜಿ. 2991.—ಸ್ ೯ 1884ನೆಯ ಇಸವಿಯ 1ನೇ ನಂಬರ್ ಚೀಫ್ ಕೋರ್ಟ್ ರೆಗ್ಯುಲೇಷನಿನ 4ನೇ ಸೆಕ್ಷನ್ ಅನುಸರಿಸಿ, ಫೆನವನ್ನು ಹೊಂದಿದ ಶ್ರೀಮ್ಮ ಮಹಾರಾಣೀ ರೀಜಂಟರವರು, ಲೆಜಿಸ್ಲೆಟಿವ್ ಸೆಕ್ರಟೆರಿ, ಗವರ್ನ್‌ಮೆಂಟ್ ಅಡ್ವೊಕೇಟ್

ಮತ್ತು ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲನರಾದ ಮೆಸ್ಸರ್ ಸಿ. ವಿಾನಾಕ್ಷಯ್ಯ, ಬ್ಯಾರಿಸ್ಟರ್ ಅಟ್‌ಲಾ ಯವರನ್ನು ಚೀಫ್ ಕೋರ್ಟಿನ ಬಬ್ಬ ಜಡ್ಜ್‌ಯವರಾಗಿ ಆಕ್ಟಿಂಗ್ ತರೀಕ್ ಮೊಕರರ್ ಮಾಡಿರುತ್ತಾರೆ.

ನಂ. 13039.—ಜಿ. 2992.—ಘನವನ್ನು ಹೊಂದಿದ ಶ್ರೀಮನ್ ಮಹಾರಾಣೀ ರೀಜಂಟರವರು, ಲೆಫ್ಟಿನೆಂಟ್ ಕರ್ನಲ್ ಜೆ. ದೇಕರಾಜೆ ಅರಸಿನವರನ್ನೂ, ಮೆಸ್ಸರ್ ಆಗಾಜಾರ್ಖಾಯವರನ್ನೂ, ತಮ್ಮ ಏಡಿಕಾಂಗರಾಗಿ ಮೊಕರರ್ ಮಾಡಿರುತ್ತಾರೆ.

ಹುಕುಂ ಬಮೋಜೀಬ್,
ಕೆ. ಶೇಷಾದ್ರಿ ಅಯ್ಯರ್,
ಮೈಸೂರ ದಿವಾನ್.

ತಾರೀಖು 28ನೇ ಫಿಬ್ರವರಿ 1895.

ನಂ. 13040.—ಜಿ. 2993.—ಸನ 1895ನೇ ಇಸವಿ ಫಿಬ್ರವರಿ 18ನೇ ಮರ್ತುಮುಳ್ಳ ಇಸ್ತಿಹಾರ್‌ನಾಮೆಯ ಮೂಲಕ ಮೊಕರರ್ ಮಾಡಲ್ಪಟ್ಟ ಕೌನ್ಸಿಲ್ ಮೆಂಬರ್‌ಗಳು ಇದರಡಿ ತಿಳಿಸಲ್ಪಡುವಂತೆ ತಮ್ಮ ಕೆಲಸಗಳಲ್ಲಿ ಪ್ರವೇಶಿಸಿದರು :—

1. ರಾಜಧರ್ಮಪ್ರವೀಣ ಮೆಸ್ಸರ್ ಟಿ. ಆರ್. ಎ. ತಂಬುಶಟ್ಟರವರು, 1895ನೆಯ ಇಸವಿ ಫಿಬ್ರವರಿ 19ನೆಯ ತಾರೀಖಿನ ಮಧ್ಯಾನ್ಹಾತ್ಪೂರ್ವ.

2. ಮೆಸ್ಸರ್ ಪಿ. ಎನ್. ಕೃಷ್ಣಮೂರ್ತಿಯವರು, 1895ನೆಯ ಇಸವಿ ಫಿಬ್ರವರಿ 23ನೇ ತಾರೀಖಿನ ಮಧ್ಯಾನ್ಹಾತ್ಪೂರ್ವ.

3. ಖಾಬಹದೂರ್ ಮೆಸ್ಸರ್ ಅಬ್ದುಲ್ ರಹಿಮಾನ್ ರವರು, 1895ನೆಯ ಇಸವಿ ಫಿಬ್ರವರಿ 19ನೆಯ ತಾರೀಖಿನ ಪೂರ್ವಾನ್ಹ.

ತಾರೀಖು 21ನೇ ಫಿಬ್ರವರಿ 1895.

ನಂ. 12087.—ಜಿ. 2870.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೆಯ ಆರ್ಟಿಕಲ್ ಅನುಸರಿಸಿ, ಮೂಲೂರು ತಾಲ್ಲೂಕು ಅಮಲ್‌ದಾರ್ ವಿ. ಎನ್. ಗೋಪಾಲರಾಯರವರು, 1895ನೆಯ ಇಸವಿ ಫಿಬ್ರವರಿ 20ನೇ ತಾರೀಖು ಮೊದಲು ಅಥವಾ ಅವರದನ್ನು ಉಪಯೋಗಿಸಿಕೊಳ್ಳಬಹುದಾದ ತಾರೀಖು ಮೊದಲು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟರುತ್ತಾರೆ.

2. ಕೋಲಾರ ಡಿಸ್ಟ್ರಿಕ್ಟ್ ಟ್ರೆಜರಿ ಖರ್ಚಾಚಿ ಪಬ್ಲಿಯು. ಕಾಮರಾಯರವರು, ವಿ. ಎನ್. ಗೋಪಾಲರಾಯರವರು ರಜಾಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಮೂಲೂರು ತಾಲ್ಲೂಕು 5ನೇ ಗ್ರೇಡ್ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟರುತ್ತಾರೆ.

ನಂ. 12809.—ಜಿ. 2872.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೆಯ ಆರ್ಟಿಕಲ್ ಅನುಸರಿಸಿ, ಬೆಂಗಳೂರು ತಾಲ್ಲೂಕು ಅಮಲ್‌ದಾರ್ ಬಿ. ನಾಗೇಶರಾಯರವರು, 1895ನೆಯ ಇಸವಿ ಫಿಬ್ರವರಿ 25ನೆಯ ತಾರೀಖು ಮೊದಲು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. 12864.—ಜಿ. 2884.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೆಯ ಆರ್ಟಿಕಲ್ ಅನುಸರಿಸಿ, ಪೋಲೀಸ್ ಇನ್‌ಸ್ಪೆಕ್ಟರ್ ಜನರಲವರ ಆಫೀಸಿನಲ್ಲಿ ಕೆಲಸ ಮಾಡುತಲಿರುವ ಅಮಲ್‌ದಾರ್ ಟಿ. ಬಾವಾರಾಯರವರು, 1895ನೆಯ ಇಸವಿ ಫಿಬ್ರವರಿ 20ನೇ ತಾರೀಖು ಮೊದಲು ಬಂದುತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. 12868.—ಜಿ. 2887.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರ್ ಡಿಸ್ಟ್ರಿಕ್ಟ್ ಪೋಲೀಸ್ ಸೂಪರ್‌ಟೆಂಡೆಂಟರಾದ ಮೆಸ್ಸರ್ ಡಿ. ದೇವರಾಜ ಅರಸಿನವರು, 1895ನೇ ಇಸವಿ ಫಿಬ್ರವರಿ 18ನೇ ಮರ್ತುಮುಳ್ಳ 12644—5. ಜೆ. 28–27ನೆಯ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸ್ ಮೂಲಕ ಕೊಡಲ್ಪಟ್ಟ ನಾಲ್ಕು ದಿನಗಳ ರಜಾ ಸೇರಿ 1895ನೆಯ ಇಸವಿ ಫಿಬ್ರವರಿ 6ನೇ ತಾರೀಖು ಮೊದಲು ಬಂದು ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ತಾರೀಖು 26ನೇ ಫಿಬ್ರವರಿ 1895.

ನಂ. 13014.—ಜಿ. 2910.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೆಯ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ಸ್ ಎಕಸ್ಟ್ರಾ ಅಸಿಸ್ಟೆಂಟ್ ಕನ್‌ಸರ್ವೇಟರಾದ ಮೆಸ್ಸರ್ ಜೆ. ಜೆ. ಮಾರ್ಟೀರೊ ಯವರು, 1895ನೇ ಇಸವಿ ಫಿಬ್ರವರಿ 16ನೇ ತಾರೀಖು ಮೊದಲು ಹನ್ನೆರಡು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟರುತ್ತಾರೆ.

ನಂ. 13018.—ಜಿ. 2914.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೆಯ ಆರ್ಟಿಕಲ್ ಅನುಸರಿಸಿ, ಅರಕಲ್‌ಗೂಡು ತಾಲ್ಲೂಕು ಅಮಲ್‌ದಾರ್ ವಿ. ಎನ್. ಗುರುರಾಯರವರು, 1895ನೆಯ ಇಸವಿ ಫಿಬ್ರವರಿ 21ನೇ ತಾರೀಖು ಮೊದಲು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. 13016.—ಜಿ. 2912.—ದಿವಾನರವರ ಪ್ರೈವೇಟ್ ಸೆಕ್ರಟರಿಯಾದ ಮೆಸ್ಸರ್ ಕೆ. ಕೃಷ್ಣ ಅಯ್ಯರವರು, 1894ನೇ ಇಸವಿ ನವಂಬರ್ 29ನೇ ತಾರೀಖುಳ್ಳ 8566.—ಜಿ. 2032ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯ ಮೂಲಕ 1894ನೇ ಇಸವಿ ಡಿಸೆಂಬರ್ ಗುರ್ತೇ ತಾರೀಖು ಮೊದಲು ಕೊಡಲ್ಪಟ್ಟ ಯರಡು ತಿಂಗಳ ಪ್ರಿವಿಲೀಜ್ ರಜಾದಿಂದ, 1895ನೆಯ ಇಸವಿ ಜನವರಿ ಗುರ್ತೇ ತಾರೀಖಿನ ಮಧ್ಯಾನ್ಹಾತ್ಪರ ಕೆಲಸಕ್ಕೆ ವಾಪಸ್ ಬಂದರಾಗಿ, ಸದರೀ ರಜಾ ಪೈಕಿ ಉಳಿದ ಭಾಗವು ರದ್ದು ಮಾಡಲ್ಪಟ್ಟಿದೆ.